ಶ್ರೀ ಎಂ. ಪಿ. ಪ್ರಕಾಶ್ (ವಾರ್ತಾ, ಪ್ರವಾಸೋದ್ಯಮ, ಸಂಸ್ಕೃತಿ ಮಂತ್ರಿ ಮತ್ತು ಬೆಂಗಳೂರು ಅಭಿವೃದ್ಧಿ ಮಂತ್ರಿಗಳು).—

ಅ) ಪ್ರವಾಸಿ ತಾಣವೆಂದು ಗುರುತಿಸಲಾಗಿದೆ.

ಆ) ಉದ್ಭವಿಸುವುದಿಲ್ಲ.

ಗ್ರಾಮಾಂತರ ಗೃಹ ನಿರ್ಮಾಣ ಮಂಡಳಿ ರಚಿಸುವುದು

೩೬೯. ಶ್ರೀ ಬಿ. ಆರ್. ನೀಲಕಂಠಪ್ಪ. (ತರೀಕೆರೆ).—ಮಾನ್ಯ ವಸತಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ೧೯೮೬-೮೭ನೇ ಸಾಲಿನಲ್ಲಿ ಗೃಹ ನಿರ್ಮಾಣ ಮಂಡಳಿಯಿಂದ ಎಷ್ಟು ಗೃಹಗಳನ್ನು ನಿರ್ಮಿಸಲಾಗಿದೆ ?

ಆ) ಗ್ರಾಮಾಂತರ ಪ್ರದೇಶದಲ್ಲಿ ಗೃಹ ನಿರ್ಮಾಣ ಮಂಡಳಿಯು ಪತಿಯಿಂದ ಅಥವಾ ಸರ್ಕಾರದ ಪತಿಯಿಂದ ಮನೆ ನಿರ್ಮಿಸಲು ಯೋಜನೆ ಇದೆಯೇ ?

ಇ) ಗ್ರಾಮಾಂತರ ಗೃಹ ನಿರ್ಮಾಣ ಮಂಡಳಿಯನ್ನು ರಚಿಸಲು ಸರ್ಕಾರದವರು ಉದ್ದೇಶಿಸಿದ್ದಾರೆಯೇ ?

ಶ್ರೀ ಮೊಹಮದ್ ಮೊಯಿನುದ್ದೀನ್ (ವಸತಿ ರಾಜ್ಯ ಸಚಿವರು).—

ಅ) ಹೌದು,

ಆ) ಗೃಹ ನಿರ್ಮಾಣ ಮಂಡಳಿ ನಗರ ಪ್ರದೇಶಗಳಲ್ಲಿ ಮನೆ ನಿರ್ಮಿಸುತ್ತದೆ ಸರ್ಕಾರದ ಪತಿಯಿಂದ ಗ್ರಾಮಾಂತರ ಪ್ರದೇಶದಲ್ಲಿ ಮನೆ ನಿರ್ಮಾಣ ಯೋಜನೆಗಳು ಇವೆ.

ಇ) ಮಂಡಳಿಯನ್ನು ಸ್ಥಾಪಿಸುವ ಯೋಜನೆ ಇಲ್ಲ. ಆದರೆ ಗೃಹ ನಿರ್ಮಾಣ ನಿಗಮವನ್ನು ರಚಿಸಲು ಸರ್ಕಾರ ಪರಿಶೀಲಿಸುತ್ತಿದೆ.

ದಸರಾ ಉತ್ಸವಕ್ಕೆ ಖರ್ಚುಮಾಡಿದ ಹಣದ ಬಗ್ಗೆ

೩೭೩. ಶ್ರೀ ರಾಜೇಗೌಡ. (ಹನೂರು) —ಮಾನ್ಯ ವಾರ್ತಾ, ಪ್ರವಾಸೋದ್ಯಮ ಸಂಸ್ಕೃತಿ ಮತ್ತು ಬೆಂಗಳೂರು ಅಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಳೆದ ವರ್ಷ ದಸರಾ ಉತ್ಸವಕ್ಕೆ ಸರ್ಕಾರದವರು ವೆಚ್ಚ ಮಾಡಿದ ಹಣವೆಷ್ಟು ?

ಆ) ಸರ್ಕಾರಕ್ಕೆ ಬಂದಿರುವ ಆದಾಯವೆಷ್ಟು ?

ಶ್ರೀ ಎಂ. ಪಿ. ಪ್ರಕಾಶ್ (ವಾರ್ತಾ, ಪ್ರವಾಸೋದ್ಯಮ, ಸಂಸ್ಕೃತಿ ಮತ್ತು ಬೆಂಗಳೂರು ಅಭಿವೃದ್ಧಿ ಮಂತ್ರಿಗಳು).—

ಅ) ರೂ. ೨೨,೨೭,೧೧೦-೮೦ ಪೈ.

ಆ) ರೂ. ೧,೨೭,೨೩೭-೦೦ ಪೈ.

ರಾಜ್ಯದಲ್ಲಿ ಜನತಾ ಮನೆಗಳು ಹಾಗೂ ನಿವೇಶನಗಳು

೩೭೪. ಶ್ರೀ ಕೆ. ಬಿ. ಕೋಳಿವಾಡ (ರಾಣೆಬೆನ್ನೂರು).— ಮಾನ್ಯ ವಸತಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಪ್ರತೀ ವರ್ಷ ಬಡ ಜನರಿಗೆ ಪರಿಚಿದ ನಿವೇಶನಗಳು ಹಾಗೂ ಕಡಿಮೆ ಬೆಲೆಯ ಜನತಾ ಮನೆಗಳ ಹಾಗೂ ಪ್ರಾಯೋಗಿಕ ಮನೆಗಳ ಸಂಖ್ಯೆ ಎಷ್ಟು ?